ಸಿಗುವುದಿಲ್ಲ. ತಾನ್‌ಸೇನ್ ಗುರು ಕೂಡ ಇರಬೇಕಲ್ಲವೆ? ಅವನು ಇತಿಹಾಸದಲ್ಲಿ ದಾಖಲಾಗಿಲ್ಲ. ಯಾಕೆಂದರೆ, ಖಂಡಿತಾ ಅವನು ಅಕ್ಬರ್‌ನ ಆಸ್ಥಾನದ ಹೊರಗಿದ್ದ. ಬೀದಿಗಳಲ್ಲಿ, ಹಳ್ಳಿಗಳಲ್ಲಿದ್ದ. ಹೀಗಾಗಿಯೇ ಇತಿಹಾಸ ಅವನನ್ನು ದಾಖಲಿಸಲಿಲ್ಲ. ಆಗಿನ ಹಳ್ಳಿಗಳಲ್ಲಿ ಒಂದು ಚಿತ್ರಕಲಾ ಪರಂಪರೆಯಿತ್ತು. ಅದನ್ನು ಹುಡುಕುವುದು, ಕಂಡುಕೊಳ್ಳುವುದು ನನ್ನ ಉದ್ದೇಶ. ರಾಜಸತ್ತೆಯಿಂದ ಪೋಷಿತಗೊಂಡ ಚಿತ್ರಕಲೆ ಮಾತ್ರ ನಮ್ಮಲ್ಲಿ ಉಳಿದುಕೊಂಡು ಬಂದಿದೆ. ಇತಿಹಾಸ ಇದನ್ನೇ ಸತ್ಯವೆಂದು ನಂಬಿಸುತ್ತಿದೆ. ಇತಿಹಾಸ ಮುಂದು ಮಾಡುತ್ತಿರುವ ಇಂಥ ಸತ್ಯವನ್ನು ಪ್ರಶ್ನಿಸಬೇಕಾಗಿದೆ. ಇದರರ್ಥ, ತಾನ್‌ಸೇನ್‌ನನ್ನು ಹೊರಗಿಟ್ಟು ಇತಿಹಾಸ ಬರೆಯಬೇಕೆಂದು ನಾನು ಹೇಳುತ್ತಿಲ್ಲ. ಇತಿಹಾಸದ ಈ ಅಪೂರ್ಣತೆಯನ್ನು ತುಂಬಬೇಕಾಗಿದೆ.

ಇನ್ನೊಂದು ಸಂಗತಿ ಗಮನಿಸಿ; 15ನೇ ಶತಮಾನದಲ್ಲಿ ರಾಜಸ್ಥಾನದೊಳಗೆ ಕೃಷ್ಣನ ಮೇಲೆ ಒಂದು ಚಿತ್ರ ಸಿಕ್ಕಿದೆ. ಇದರಲ್ಲಿ ಕೃಷ್ಣ ಹಾವಿನ ಹೆಡೆಯ ಮೇಲೆ ನಿಂತಿದ್ದಾನೆ. ಅವನ ಸುತ್ತ ನದಿಯಿದೆ. ನದಿಯ ನೀರು ಕಪ್ಪಾಗಿದೆ. ಅದು ಯಮುನಾ ನದಿ. ನದಿಯ ನೀರು ಕಪ್ಪು ಯಾಕಾಗಿದೆ ಎಂದರೆ ಹಾವಿನ ವಿಷದ ಕಾರಣದಿಂದಾಗಿ. ಯಾವುದೋ ಕೃತಿಯ ವಿವರಗಳ ಆಧಾರದಿಂದ ಈ ಚಿತ್ರವನ್ನು ಬರೆಯಲಾಗಿದೆ. 17ನೇ ಶತಮಾನದಲ್ಲಿ ಇಂಥದ್ದೇ ಒಂದು ಚಿತ್ರ ಲಭ್ಯವಾಗಿದೆ. 18 ಮತ್ತು 19ನೇ ಶತಮಾನದಲ್ಲೂ ಕೂಡ ಇಂಥ ಚಿತ್ರ ನಮಗೆ ದೊರೆಯುತ್ತದೆ. ಮುಂದೆ ಎನ್. ಎಸ್. ಬೇಂದ್ರೆ ಅವರು ಕೂಡ ಇಂಥದ್ದೊಂದು ಚಿತ್ರ ಮಾಡಿದರು. ಎಂ.ಎಫ್. ಹುಸೇನ್ ಕೂಡ ಇಂಥ ಚಿತ್ರ ಮಾಡಿದ್ದಾರೆ. ನೇಪಾಳದ ಒಂದು ಅಂಚೆಚೀಟಿಯ ಮೇಲೂ ಈ ಚಿತ್ರವಿದೆ. ಯಾಕೆ ಈ ಚಿತ್ರ ಮತ್ತೆ ಮತ್ತೆ ಪುನರಾವರ್ತನೆಗೊಳ್ಳುತ್ತಿದೆ? ಇಂಥ ಚಿತ್ರಗಳಿಂದ ನಮ್ಮ ಕಲಾ ಪರಂಪರೆಗೆ ಆದ ಉಪಯೋಗವೇನು? ಈ ಪ್ರಶ್ನೆಗಳನ್ನು ನಾನು ನನ್ನ ಪುಸ್ತಕದಲ್ಲಿ ಕೇಳಿಕೊಂಡಿದ್ದೇನೆ. ನಮ್ಮ ಮೇಲೆ ಅಂಥ ಯಾವ ಒತ್ತಡವಿದೆ? ಅದೇ ಚಿತ್ರವನ್ನು ಮತ್ತೆ ಮತ್ತೆ ಯಾಕೆ ಚಿತ್ರಿಸುತ್ತಿದ್ದೇವೆ? ಇದಕ್ಕೆ ಕಾರಣ ಧಾರ್ಮಿಕ ಪ್ರವೃತ್ತಿ. ಇದರಿಂದ ಏನಾಗುತ್ತಿದೆ ಅಂದರೆ, ಅನೇಕರು ತಮ್ಮ ಸಹಜ ಪ್ರವೃತ್ತಿಗೆ ಹೊಳೆಯುವ ಕಲಾಕೃತಿಗಳನ್ನು ಚಿತ್ರಿಸದೆ ಮಾರುಕಟ್ಟೆಯ ಕಲಾಕೃತಿಗಳನ್ನು ಚಿತ್ರಿಸುತ್ತಿದ್ದಾರೆ. ಅವರು ನಿಜವಾದ ಚಿತ್ರಕಲಾಕೃತಿಯನ್ನು ಸೃಷ್ಟಿಸುತ್ತಿಲ್ಲವೆಂಬುದೇ ಸತ್ಯವಾದ ಮಾತು. ನನಗೆ ನನ್ನದೇ ಚಿತ್ರಗಳನ್ನು ರೂಪಿಸಲು ಸಾಧ್ಯವಿದೆ. ನನ್ನ ಚಿತ್ರಗಳಿಗೆ ಕಥೆಗಳ ಆಧಾರ ಬೇಕಿಲ್ಲ. ಈ ಸತ್ಯಗಳನ್ನು ನಾನು ಹೇಳಲು ಯತ್ನಿಸುತ್ತಿರುವೆ. ಇನ್ನೂ ಕೆಲ ಗಂಭೀರ ಸತ್ಯಗಳೆಂದರೆ ಚಿತ್ರಕಲೆಯ ಮೂಲಕ ನಾವು ಜನರಲ್ಲಿ ಕೆಲ ಮೌಢ್ಯಗಳನ್ನು ಹುಟ್ಟುಹಾಕಿದ್ದೇವೆ. ಕೆಲ ಭಯಗಳನ್ನು ಕೂಡ. ಅಶಿಕ್ಷಿತ ಜನರು ಭಯಭಕ್ತಿಯಿಂದ ಚಿತ್ರಗಳನ್ನು ನೋಡುವಂತೆ ಅವರನ್ನು ಪ್ರೇರೇಪಿಸಿದ್ದೇವೆ. ನಮ್ಮ ಚಿತ್ರಕಲೆ ಜನರ ಜೊತೆಗಿಲ್ಲ ಎಂಬ ಸತ್ಯವನ್ನು ನಾನು ಹೇಳಹೊರಟಿದ್ದೇನೆ. ಇದನ್ನು ನಾನೊಬ್ಬನೇ ಹೇಳುತ್ತಿದ್ದೇನೆಂದಲ್ಲ, ಅನೇಕರು ಹೇಳಿದ್ದಾರೆ. ಅವರಲ್ಲಿ ನಾನು ಕೂಡ ಒಬ್ಬ. ಜನರಿಗೆ ಸತ್ಯ ಗೊತ್ತಾಗಲಿ ಎಂಬುದು ನನ್ನ ಆಸೆ. ನನಗೆ ಗೊತ್ತಿಲ್ಲದ ಸತ್ಯಗಳೂ ಇವೆ. ಆದರೆ ಕೆಲವರಾದರೂ ಸತ್ಯವನ್ನು ಹೇಳಲು ಶುರುಮಾಡಬೇಕಲ್ಲವೆ.

◆ **ಚಿತ್ರಕಲೆಯಲ್ಲಿ ಪ್ರಜಾತಾಂತ್ರಿಕ ವ್ಯವಸ್ಥೆ ಅಂತಂದ್ರೆ ಏನು? ಈ ಕುರಿತು ನೀವು ಅನೇಕ ಕಡೆ ಪ್ರಸ್ತಾಪಿಸಿದ್ದೀರಿ. ನೀವು ಈ ಪ್ರಜಾತಾಂತ್ರಿಕ ವ್ಯವಸ್ಥೆ ಕೈತಪ್ಪುತ್ತಿರುವ ಕುರಿತು ಆತಂಕದಿಂದ ಬರೆದಿರುವಿರಿ. ಈ ಆತಂಕ ಯಾಕೆ ನಿರ್ಮಾಣವಾಯಿತು?**

ಕೆಲವರು ಕವಿತೆ ಬರೆಯುತ್ತಿದ್ದಾರೆ, ಮತ್ತೆ ಕೆಲವರು ಪೇಂಟಿಂಗ್ ಮಾಡುತ್ತಿದ್ದಾರೆ. ರಾಮಾಯಣ, ಮಹಾಭಾರತದ ಕಥೆಗಳನ್ನು ಆಧರಿಸಿ ಇವೆಲ್ಲ ಕೆಲಸಗಳನ್ನು ಮಾಡುತ್ತಿದ್ದಾರೆ. ನೀವು ಅಜಂತಾಗೆ ಹೋಗಿ ನೋಡಿ. ಕ್ರಿಸ್ತಪೂರ್ವ ಕಾಲದ ಚಿತ್ರಗಳಿವೆ ಅಲ್ಲಿ. ಹೆಚ್ಚಿನ ಚಿತ್ರಗಳು ಜಾತಕ ಕಥೆಗಳನ್ನು ಆಧರಿಸಿವೆ. ಇದು ಒಂದು ಕಥಾ ಚಿತ್ರಣ. ಇದನ್ನು ಇಲ್ಲಸ್ಟ್ರೇಶನ್ ಎಂದು ಕರೆಯುವರು. ಇಲ್ಲಸ್ಟ್ರೇಶನ್ ಮತ್ತು ಪೇಂಟಿಂಗ್‌ನಲ್ಲಿರುವ ವ್ಯತ್ಯಾಸವನ್ನು ನಮ್ಮ ಭಾರತೀಯ ಚಿತ್ರಕಲಾವಿದರು ಅನೇಕ ವರ್ಷಗಳ ಕಾಲ ಅರ್ಥಮಾಡಿಕೊಳ್ಳಲಿಲ್ಲ. 'ಅಕ್ಬರ್‌ನಾಮಾ' ಇದೆಯಲ್ಲಾ, ಅದು ಇಲ್ಲಸ್ಟ್ರೇಶನ್. ಪೇಂಟಿಂಗ್, ಸಂಗೀತ ಮತ್ತು ಸಾಹಿತ್ಯದಲ್ಲಿ ಒಂದು ಸ್ವಾಯತ್ತವಾದ ಸ್ಥಿತಿ ಇರುತ್ತದೆ. ಒಂದು ಸರ್ಕಲ್. ಅಂದರೆ ಮೊದಲಿಗೆ ಒಂದು ವಿಚಾರ ಹೊಳೆಯುತ್ತದೆ, ನಂತರ ಈ ವಿಚಾರವನ್ನು